13-12-2024

(29)

## <u>ಕರ್ನಾಟಕ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಎಸ್.ವಿ. ಸಂಕನೂರು ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉನ್ನತ ಶಿಕ್ಷಣ ಸಚಿವರ ಉತ್ತರ.</u>

ವಿಷಯ:

ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ (ಸಮಗ್ರ ವಿಶ್ವವಿದ್ಯಾನಿಲಯ ಮತ್ತು ಕಾಲೇಜು ನಿರ್ವಹಣೆ ಪೋರ್ಟಲ್) ಪೋರ್ಟಲ್ ವ್ಯವಸ್ಥೆ 2021-22ರಿಂದ ಜಾರಿಗೊಂಡಿದೆ. ಹೀಗಾಗಿ ಎಲ್ಲಾ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗೂ ಏಕರೂಪ ಅಂಕಪಟ್ಟಿ ನೀಡಲು ನಿರ್ಧರಿಸಿ ವಿಶ್ವವಿದ್ಯಾಲಯಗಳ ಅಂಕಪಟ್ಟಿ ವಿತರಣೆ ಸ್ವಾಯತ್ತತೆ ಕಡಿತಗೊಳಿಸಲಾಗಿದೆ. ಆದರೆ, ಸಕಾಲದಲ್ಲಿ ಎಲ್ಲಾ ವಿದ್ಯಾರ್ಥಿಗಳ ಅಂಕಪಟ್ಟಿ ಸಿದ್ಧಪಡಿಸಲು ಸಾಧ್ಯವಾಗದ ಪರಿಣಾಮ ಪದವಿ ಪಡೆದ ವಿದ್ಯಾರ್ಥಿಗಳು ಅಂಕಪಟ್ಟಿ ಸಿಗದೇ ಸಂಕಷ್ಟ ಎದುರಿಸುತ್ತಿದ್ದಾರೆ. ಈ ಕುರಿತು ಮೂಲ ಅಂಕಪಟ್ಟಿ ನೀಡುವಂತೆ ರಾಜ್ಯಪಾಲರು 2022ರಲ್ಲಿ ಆದೇಶಿಸಿದ್ದರೂ ಪಾಲನೆ ಆಗಿಲ್ಲ. ಈ ಬಗ್ಗೆ ವಿಶ್ವವಿದ್ಯಾಲಯಗಳನ್ನು ಕೇಳಿದರೆ ಪೋರ್ಟಲ್ ಸಮಸ್ಯೆ ಇದೆ ಎಂದು ಹಾರಿಕೆ ಉತ್ತರ ನೀಡುತ್ತಿದ್ದಾರೆ. ಇದರಿಂದ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಪದವಿ ಮುಗಿಸಿದ ಲಕ್ಷಾಂತರ ವಿದ್ಯಾರ್ಥಿಗಳಿಗೆ ಮೊದಲ ವರ್ಷ, ಎರಡನೇ ವರ್ಷ ಹಾಗೂ ಮೂರನೇ ವರ್ಷದ ಪದವಿ ಪರೀಕ್ಷೆಗಳ ಮೂಲ ಅಂಕಪಟ್ಟಿ ನೀಡಿರುವುದಿಲ್ಲ.

ಹೀಗಾಗಿ ಪದವಿ ಮುಗಿಸಿದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಹಾಗೂ ನೌಕರಿ ಪಡೆಯಲು ಒರಿಜಿನಲ್ ಅಂಕಪಟ್ಟಿ ಅವಶ್ಯಕವಾಗಿದೆ. ಆದರೆ, ನ್ಯಾಷನಲ್ ಅಕಾಡೆಮಿಕ್ ಡಿಪಾಸಿಟರಿ (ಎನ್‌ಎಡಿ) ನ ಡಿಜಿ ಲಾಕರ್‌ನಲ್ಲಿ ಡಿಜಿಟಲ್ ಅಂಕಪಟ್ಟಿ ಪಡೆಯಬಹುದು ಎಂದು ವಿಶ್ವವಿದ್ಯಾಲಯಗಳು ಹೇಳುತ್ತಿವೆ. ಈ ಡಿಜಿಟಲ್ ಅಂಕಪಟ್ಟಿಗೆ ಅಟೆಸ್ಟೇಷನ್ ಮಾಡಿ ನೀಡುತ್ತಿವೆ. ಆದರೆ, ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳು ವಿದೇಶಿ ಶಿಕ್ಷಣ ಸಂಸ್ಥೆಗಳು ಇದನ್ನು ಒಪ್ಪುತ್ತಿಲ್ಲ, ಇದು ಅಲ್ಲದೇ ನೌಕರಿ ತೆಗೆದುಕೊಳ್ಳುವ ಎಂಎನ್‌ಸಿ ಕಂಪನಿ ಮತ್ತು ಇತರೆ ಸಂಸ್ಥೆಯವರು ಮೂಲ ಅಂಕಪಟ್ಟಿ ಕೇಳುತ್ತಿವೆ. ಹೀಗಾಗಿ ಅದೆಷ್ಟೋ ವಿದ್ಯಾರ್ಥಿಗಳು ಶಿಕ್ಷಣ, ನೌಕರಿಯಿಂದ ವಂಚಿತರಾಗುತ್ತಿದ್ದಾರೆ. ವಿದ್ಯಾರ್ಥಿವೇತನ ಪಡೆಯಲು ತೊಂದರೆಯಾಗಿದೆ, ಸದ್ಯ ಕೊಡುತ್ತಿರುವ ಡಿಜಿಟಲ್ ಅಂಕಪಟ್ಟಿಯಲ್ಲಿಯೂ ಕೂಡ ಸಾಕಷ್ಟು ಮುದ್ರಣ ದೋಷಗಳು ಕಾಣುತ್ತಿವೆ.

2021-22ರಲ್ಲಿ ಸಮಗ್ರ ವಿಶ್ವವಿದ್ಯಾನಿಲಯ ಮತ್ತು ಕಾಲೇಜು ನಿರ್ವಹಣೆ ಪೋರ್ಟಲ್ ಜಾರಿಗೊಂಡ ತಕ್ಷಣವೇ ಸರ್ಕಾರ ಅಂಕಪಟ್ಟಿ ವಿನ್ಯಾಸ ರಚನೆಗೊಳಿಸಬೇಕಾಗಿತ್ತು. ಆದರೆ, ಉನ್ನತ ಶಿಕ್ಷಣ ಇಲಾಖೆಯು ಮೂರು ವರ್ಷಗಳ ಬಳಿಕ ಅಂದರೆ, 2024ರ ಏಪ್ರಿಲ್‌ನಲ್ಲಿ ಅಂಕಪಟ್ಟಿ ಹೇಗೆ ಇರಬೇಕು ಎಂಬುದರ ಫಾರ್ಮೆಟ್ ಅಂತಿಮಗೊಳಿಸಿತು. ಅಲ್ಲಿಯವರೆಗಿನ ಸುಮಾರ 54 ಲಕ್ಷ ವಿದ್ಯಾರ್ಥಿಗಳ ಅಂಕಪಟ್ಟಿಗಳ ಮುದ್ರಣ ಬಾಕಿ ಉಳಿದುಕೊಂಡಿದೆ.

ಆದಕಾರಣ, ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಈಗಲಾದರೂ ಸರ್ಕಾರ ಕಣ್ಣು ತೆರೆದು ವಿಳಂಬ ಮಾಡದೇ ಮಾನ್ಯ ಉನ್ನತ ಶಿಕ್ಷಣ ಸಚಿವರು ಮೂಲ ಅಂಕಪಟ್ಟಿ ನೀಡಲು ಸೂಕ್ತ ಕ್ರಮಕೈಗೊಳ್ಳಬೇಕೆಂದು ಒತ್ತಾಯಿಸುತ್ತೇನೆ.

**ಉತ್ತರ:**

ಶಿಕ್ಷಣ ಕ್ಷೇತ್ರದಲ್ಲಿ ಆಡಳಿತಾತ್ಮಕ ಮತ್ತು ಶೈಕ್ಷಣಿಕ ಸುಧಾರಣೆಗಳನ್ನು ತರಲು ಹಾಗೂ ಮಾಹಿತಿ ತಂತ್ರಜ್ಞಾನದ ಬಳಕೆಯ ಮೂಲಕ ಸಮರ್ಥ ಸೇವೆಗಳನ್ನು ತಲುಪಿಸಲು ಭಾರತ ಸರ್ಕಾರವು ಶೈಕ್ಷಣಿಕ ಪ್ರಶಸ್ತಿಗಳ ಡಿಜಿಟಲ್ ಡಿಪಾಸಿಟರಿಯ National Academic Depository (NAD) ಸಂಸ್ಥೆಯನ್ನು ದಿನಾಂಕ:09.07.2017ರಲ್ಲಿ ಸ್ಥಾಪಿಸಿರುತ್ತದೆ. UGC ಯು NAD ಪ್ರಾರಂಭವಾದಾಗಿನಿಂದ ವಿವಿಧ ಕೇಂದ್ರಿಯ ವಿಶ್ವವಿದ್ಯಾಲಯಗಳು, ರಾಜ್ಯ ವಿಶ್ವವಿದ್ಯಾಲಯಗಳು, ಖಾಸಗಿ ವಿಶ್ವವಿದ್ಯಾಲಯಗಳು, ಕೇಂದ್ರಿಯ ಉನ್ನತ ಶಿಕ್ಷಣ ಸಂಸ್ಥೆಗಳು, ಶಾಲಾ ಮಂಡಳಿಗಳು ಸೇರಿದಂತೆ ಅನೇಕ ಶೈಕ್ಷಣಿಕ ಸಂಸ್ಥೆಗಳು NAD ನಲ್ಲಿ ವಿದ್ಯಾರ್ಥಿಗಳ ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳನ್ನು ಡಿಜಿಟಲ್ ಪ್ರತಿಗಳನ್ನು NAD ಮತ್ತು DigiLocker ನಲ್ಲಿ ಅಪ್ ಲೋಡ್ / ಶೇಖರಿಸಲು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಸೂಚನೆ ನೀಡಿರುತ್ತದೆ.

ಭಾರತ ಸರ್ಕಾರದ ಎಲೆಕ್ಟ್ರಾನಿಕ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಡಿಜಿಲಾಕರ್ ತಂತ್ರಾಂಶವು ಮೂಲ ವಿತರಕರಿಂದ ಡಿಜಿಲಾಕರ್ NAD ಪ್ಲಾಟ್ ಫಾರ್ಮ್ ಮೂಲಕ ಅಪ್ಲೋಡ್ ಮಾಡಿದ ನಂತರ, ಎಲೆಕ್ಟ್ರಾನಿಕ್ ರೂಪದಲ್ಲಿ ನೀಡಲಾದ ವಿದ್ಯಾರ್ಥಿಯ ಶೈಕ್ಷಣಿಕ ದಾಖಲೆಗಳನ್ನು ಸೆಳೆಯುವ ಸೌಲಭ್ಯವನ್ನು ಹೊಂದಿದ್ದು, ಡಿಜಿಲಾಕರ್ ಪ್ಲಾಟ್ ಫಾರ್ಮನಲ್ಲಿ ಲಭ್ಯವಿರುವ ಮೂಲ ದಾಖಲೆಗಳು ಮಾಹಿತಿ ತಂತ್ರಜ್ಞಾನ ಕಾಯ್ದೆ-2020ರ ನಿಬಂಧನೆಯ ಪ್ರಕಾರ ಮಾನ್ಯವಾದ ದಾಖಲೆಗಳಾಗಿರುತ್ತವೆ ಹಾಗೂ ಡಿಜಿಲಾಕರ್ ಖಾತೆಗಳಲ್ಲಿ ನೀಡಲಾದ ದಾಖಲೆಗಳಲ್ಲಿ ಲಭ್ಯವಿರುವ ಪದವಿಗಳ ಅಂಕಪಟ್ಟಿಗಳು, ಪ್ರಮಾಣ ಪತ್ರಗಳು ಮತ್ತು ಇತರೆ ಶೈಕ್ಷಣಿಕ ದಾಖಲೆಗಳನ್ನು ದೃಢೀಕೃತ ದಾಖಲೆಗಳಾಗಿ ಸ್ವೀಕರಿಸಲು ವಿಶ್ವವಿದ್ಯಾಲಯ ಧನ ಆಯೋಗವು(UGC) ಉನ್ನತ ಶಿಕ್ಷಣ ಸಂಸ್ಥೆಗಳಿಗೆ ತಿಳಿಸಿರುತ್ತದೆ.

ರಾಜ್ಯದ ಉನ್ನತ ಶಿಕ್ಷಣ ವಲಯದ ಶೈಕ್ಷಣಿಕ ಮತ್ತು ಆಡಳಿತ ವಿಭಾಗಗಳಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಮಾಹಿತಿ ತಂತ್ರಜ್ಞಾನವನ್ನು ಉನ್ನತೀಕರಿಸಿ, ಪಾರದರ್ಶಕ ಆಡಳಿತ ಮತ್ತು ಗುಣಾತ್ಮಕ ಶೈಕ್ಷಣಿಕ ಗುಣಮಟ್ಟವನ್ನು ವೃದ್ಧಿಸಲು ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ನಿರ್ವಹಣಾ ತಂತ್ರಾಂಶ (Unified University & College Management System-UUCMS ) ವನ್ನು, ಇ-ಆಡಳಿತ ಇಲಾಖೆಯ ಸೆಂಟರ್ ಫಾರ್ ಸ್ಮಾರ್ಟ್ ಗವರ್ನೆನ್ಸ್ (CSG) ರವರ ಸಹಯೋಗದೊಂದಿಗೆ ರಾಜ್ಯದಲ್ಲಿ ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ನಿರ್ವಹಣಾ ತಂತ್ರಾಂಶ (Unified University & College Management System-UUCMS) ವನ್ನು 2020-21ನೇ ಸಾಲಿನಲ್ಲಿ ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಲಾಗಿದೆ.

ಸದರಿ ತಂತ್ರಾಂಶದಲ್ಲಿ 2021-22ನೇ ಸಾಲಿನ ನಂತರ ಫಲಿತಾಂಶ ಪ್ರಕಟಗೊಂಡಂತೆ ಸೆಮಿಸ್ಟರ್‌ವಾರು ಅಂಕಪಟ್ಟಿಗಳನ್ನು NAD ಗೆ ಅಪ್‌ಲೋಡ್ ಮಾಡುವುದರ ಜೊತೆಗೆ ಅಂಕಪಟ್ಟಿಯ ವಿನ್ಯಾಸವನ್ನು ಪೂರ್ಣಗೊಳಿಸಿ ಮುದ್ರಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. UUCMS ನ ಪ್ರಥಮ ಸಾಲಿನ ವಿದ್ಯಾರ್ಥಿಗಳು ತಮ್ಮ ಅಂತಿಮ ಸೆಮಿಸ್ಟರ್ (6ನೇ ಸೆಮಿಸ್ಟರ್) ಅನ್ನು ಆಗಸ್ಟ್-ಸೆಪ್ಟೆಂಬರ್, 2024ರಲ್ಲಿ ಪೂರ್ಣಗೊಳಿಸಿದ್ದು, ಅವರುಗಳ ಫಲಿತಾಂಶವನ್ನು ಪ್ರಕಟಣೆಗೊಳಿಸಲಾಗಿದೆ. ಆದರೆ, 6ನೇ ಸೆಮಿಸ್ಟರ್‌ನಲ್ಲಿ ಕೊಡಬೇಕಾಗಿದ್ದ Consolidated ಅಂಕಪಟ್ಟಿ (6ನೇ ಸೆಮಿಸ್ಟರ್‌ನಲ್ಲಿ ಪಡೆದ ಅಂಕಗಳು ಮತ್ತು 1 ರಿಂದ 5ನೇ ಸೆಮಿಸ್ಟರ್‌ವರೆಗಿನ ಸಂಕ್ಷಿಪ್ತ ಅಂಕಗಳು) ವಿನ್ಯಾಸನವನ್ನು ಏಪ್ರಿಲ್, 2024ರಂದು ಅಂತಿಮಗೊಳಿಸಲಾಗಿದ್ದು, ರಾಜ್ಯದ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಲಯಗಳು ಸುಮಾರು 16 ಲಕ್ಷಕ್ಕಿಂತಲೂ ಹೆಚ್ಚಿನ ವಿದ್ಯಾರ್ಥಿಗಳು ಪರೀಕ್ಷೆಗಳಿಗೆ ಬಳಸಿಕೊಂಡು ಕಾಲಾಕಾಲಕ್ಕೆ ಫಲಿತಾಂಶ ಘೋಷಣೆ ಮಾಡಲಾಗುತ್ತಿದೆ.

NAD-DigiLocker ಮೂಲಕ ಸೆಮಿಸ್ಟರ್ ಪ್ರಕಾರದ ಅಂಕಪಟ್ಟಿಗಳನ್ನು ಅಪ್ ಲೋಡ್ ಮಾಡಲು UUCMS ನಲ್ಲಿ ಇಂಟರ್‌ಫೇಸ್ ರಚಿಸಲಾಗಿದ್ದು, ಫಲಿತಾಂಶಗಳನ್ನು ಮತ್ತು ಪ್ರಮಾಣ ಪತ್ರಗಳನ್ನು 24 ಘಂಟೆಗಳಿಗಿಂತ ಹೆಚ್ಚು ಸಮಯ ತೆಗೆದುಕೊಳ್ಳದೇ ಅಪ್‌ಲೋಡ್ ಮಾಡಲಾಗುತ್ತಿದೆ. UUCMS ನಲ್ಲಿ ಅಂಕಪಟ್ಟಿಗಳನ್ನು Normal sheet ಅಥವಾ Preprinted Paper ನಲ್ಲಿ ಮುದ್ರಿಸುವ ಅವಕಾಶವನ್ನು ಸಹ ಕಲ್ಪಿಸಲಾಗಿದೆ. ವಿಶ್ವವಿದ್ಯಾಲಯಗಳ ಅಂಕಪಟ್ಟಿಗಳು ಆಯಾ ವಿಶ್ವವಿದ್ಯಾಲಯಗಳಲ್ಲಿ ಲಭ್ಯವಿರುತ್ತವೆ

UUCMS ಎಲ್ಲಾ ಸೇವೆಗಳಿಗೆ ಯಾವುದೇ ಪಾಲುದಾರರಿಂದ ಯಾವುದೇ ಶುಲ್ಕವನ್ನು ಪಡೆಯದೆ ಸರ್ಕಾರವು ಉಚಿತವಾಗಿ ಸೇವೆಯನ್ನು ನೀಡುತ್ತಿದೆ. ಇದರಿಂದ ಈ ಹಿಂದೆ ವಿಶ್ವವಿದ್ಯಾಲಯಗಳು ಖಾಸಗಿ ಸಂಸ್ಥೆಗಳಿಗೆ ನೀಡುತ್ತಿದ್ದ ರೂ. 150 ಕೋಟಿಗಳಿಗಿಂತಲೂ ಹೆಚ್ಚು ವೆಚ್ಚವು ಉಳಿತಾಯವಾಗುತ್ತಿದೆ.

ವಿಶ್ವವಿದ್ಯಾಲಯಗಳು ಕೋಟ್ಯಾಂತರ ರೂಪಾಯಿಗಳ ವೆಚ್ಚದಲ್ಲಿ ವಾಟರ್‌ಮಾರ್ಕ್, ಹರಿಯಲಾಗದ ಕಾಗದ (Watermarked, imperishable Paper) ಮೂಲಕ ಅಂಕಪಟ್ಟಿಗಳನ್ನು ತಯಾರಿಸಲು ಹೆಚ್ಚಿನ ವೆಚ್ಚವನ್ನು ಮಾಡಲಾಗುತ್ತಿದ್ದು, ಇದರಿಂದ ವಿದ್ಯಾರ್ಥಿಗಳಿಗೆ ಯಾವುದೇ ಮೌಲ್ಯವರ್ಧಿತ ಪ್ರಯೋಜನ ಇಲ್ಲದಿರುವುದನ್ನು ಪರಿಗಣಿಸಿ, 2023-24ನೇ ಶೈಕ್ಷಣಿಕ ಸಾಲಿನಿಂದ ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿನ ಅಧೀನ ಇಲಾಖೆಗಳು, ಸಾರ್ವಜನಿಕ ವಿಶ್ವವಿದ್ಯಾಲಯಗಳು ಹಾಗೂ ಎಲ್ಲಾ ಶೈಕ್ಷಣಿಕ ಸಂಸ್ಥೆಗಳು ಪದವಿ ಮತ್ತು ಸ್ನಾತಕೋತ್ತರ ಪದವಿ ಅಂಕಪಟ್ಟಿಗಳು, ಪ್ರಮಾಣ ಪತ್ರಗಳು ಮತ್ತು ಇತರ ಶೈಕ್ಷಣಿಕ ದಾಖಲೆಗಳನ್ನು NAD- DigiLocker ನಲ್ಲಿ ಡಿಜಿಟಲ್ ರೂಪದಲ್ಲಿ ಕಡ್ಡಾಯವಾಗಿ ಸಂಗ್ರಹಿಸಿಡಲು, ಉನ್ನತ ಶಿಕ್ಷಣದ ವಿದ್ಯಾರ್ಥಿಗಳು ಸದರಿ ಅಂಕಪಟ್ಟಿಗಳ Credits ಗಳನ್ನು Academic Bank of Credit (ABC) ನಲ್ಲಿ ಕಡ್ಡಾಯವಾಗಿ ನೊಂದಾಯಿಸಿಕೊಳ್ಳಲು ಆದೇಶಿಸಿ, ವಿವಿಧ ನೇಮಕಾತಿ ಪ್ರಾಧಿಕಾರಗಳು/ ಸಂಸ್ಥೆಗಳು ನೇಮಕಾತಿ ಸಮಯದಲ್ಲಿ NAD-DigiLocker ನಲ್ಲಿನ ಅಂಕಪಟ್ಟಿ ಹಾಗೂ ಪ್ರಮಾಣ ಪತ್ರಗಳನ್ನು ದೃಢೀಕೃತವೆಂದು ಪರಿಗಣಿಸುವಂತೆ ಸರ್ಕಾರದ ಆದೇಶ ಸಂಖ್ಯೆ: ಇಡಿ 29 ಇಜಿಒವಿ 2023, ದಿನಾಂಕ:16.10.2023ರಲ್ಲಿ ಆದೇಶಿಸಿದೆ.

ಸದರಿ ಅಂಕಪಟ್ಟಿಗಳ Credits ಗಳನ್ನು ಪ್ರವೇಶಾತಿ, **ವಿವಿಧ ನೇಮಕಾತಿ ಪ್ರಾಧಿಕಾರಗಳು/ ಸಂಸ್ಥೆಗಳು ನೇಮಕಾತಿ ಸಮಯದಲ್ಲಿ NAD-DigiLocker ನಲ್ಲಿನ ಅಂಕಪಟ್ಟಿ ಹಾಗೂ ಪ್ರಮಾಣ ಪತ್ರಗಳನ್ನು ದೃಢೀಕೃತವೆಂದು ಪರಿಗಣಿಸುವಂತೆ ವಿಶ್ವವಿದ್ಯಾಲಯ ಧನ ಆಯೋಗವು (UGC) ಸಹ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ದಿನಾಂಕ:23.09.2024 ರಲ್ಲಿ ನಿರ್ದೇಶನ ನೀಡಿರುತ್ತದೆ.**

ಸಂಖ್ಯೆ: ಇಡಿ 266 ಯುಎನ್‌ಇ 2024

(ಡಾ: ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ, ಸಚಿವರು